India Justice Report | 2025

# ಭಾರತದ 20.3 ಲಕ್ಷ ಪೋಲಿಸ್ ಪಡೆಯಲ್ಲಿ 1000ಕ್ಕಿಂತ ಕಡಿಮೆ ಮಹಿಳಾ ಹಿರಿಯ ಅಧಿಕಾರಿಗಳು ಎದು ಹೇಳಿದ 2025 ಇಂಡಿಯಾ ಜಸ್ಟಿಸ್ ರಿಪೋರ್ಟ್(ಭಾರತ ನ್ಯಾಯ ವರದಿ)

## ಅಗ್ರಮಾನ್ಯ ಶ್ರೇಯಾಂಕಗಳನ್ನು ಬಾಚಿಕೊಂಡ ದಕ್ಷಿಣಾತ್ಯ ರಾಜ್ಯಗಳು, 1ನೆ ಸ್ಥಾನ ಉಳಿಸಿಕೊಂಡಿರುವ ಕರ್ನಾಟಕ

ಕೆಲವು ಸುಧಾರಣೆಗಳು:

- ಎಲ್ಲಾ ಪೋಲಿಸ್ ಠಾಣೆಗಳ ಪೈಕಿ 78% ಮಹಿಳಾ ಸಹಾಯ ಮೇಜು ಹೊಂದಿವೆ
- ಜಿಲ್ಲಾ ನ್ಯಾಯಾಂಗದಲ್ಲಿ ಮಹಿಳೆಯರ ಪಾಲು 38%
- ಎಲ್ಲಾ ಸೆರೆಮನೆಗಳ ಪೈಕಿ 86% ಈಗ ವೀಡಿಯೋ ಸಮಾವೇಶ ಸೌಲಭ್ಯಗಳನ್ನು ಹೊಂದಿವೆ
- 2019 ಮತ್ತು 2023 ನಡುವೆ ಕಾನೂನು ನೆರವಿನ ಮೇಲಿನ ತಲಾವಾರು ವೆಚ್ಚ ಹೆಚ್ಚುಕಡಿಮೆ ದ್ವಿಗುಣಗೊಂಡು Rs 6.46 ತಲುಪಿದೆ.

ಆದರೆ, ರಾಷ್ಟ್ರೀಯವಾಗಿ, ಸತತ ಲೋಪಗಳು:

- ಒಂದೇ ಒಂದು ರಾಜ್ಯ/ಕೇಂದ್ರಾಡಳಿತ ಪ್ರದೇಶ ಕೂಡ ಪೋಲಿಸ್‌ನಲ್ಲಿ ಮಹಿಳೆಯರಿಗಾಗಿ ತಮ್ಮದೇ ಸ್ವಂತ ಕಾದಿರಿಸುವಿಕೆ ಕೋಟಾಗಳನ್ನು ಪೂರೈಸಿಲ್ಲ
- ಜಿಲ್ಲಾ ನ್ಯಾಯಾಂಗದೊಳಗೆ, ಎಸ್‌ಟಿ(ಪರಿಶಿಷ್ಟ ವರ್ಗ)ದ ಪಾಲು 5% ಆಗಿದ್ದರೆ ಎಸ್‌ಸಿ(ಪರಿಶಿಷ್ಟ ಜಾತಿ)ಯ ಪಾಲು 14%
- ಪೋಲಿಸ್ ಪಡೆಯೊಳಗೇ, ಎಸ್‌ಟಿ(ಪರಿಶಿಷ್ಟ ವರ್ಗ)ದ ಪಾಲು 12% ಆಗಿದ್ದರೆ ಎಸ್‌ಸಿ(ಪರಿಶಿಷ್ಟ ಜಾತಿ)ಯ ಪಾಲು 17%
- ಪ್ಯಾರಾಲೀಗಲ್ ಸ್ವಯಂಸೇವಕರ ಸಂಖ್ಯೆ ದಾಖಲೆ ಇಳಿಮುಖ ಕಂಡಿದೆ; ಕಳೆದ ಐದು ವರ್ಷಗಳಲ್ಲಿ 38%ಗೆ ಇಳಿದಿದೆ
  ರಾಷ್ಟ್ರವ್ಯಾಪಿಯಾಗಿ ಇರುವ ಸೆರೆಮನೆಗಳಾದ್ಯಂತ ಕೇವಲ 25 ಮಾನಸಿಕ ರೋಗತಜ್ಞರು/ಮನೋವೈದ್ಯರಿದ್ದಾರೆ

**15 ಏಪ್ರಿಲ್, ನವದೆಹಲಿ:** ಇಂದು ಬಿಡುಗಡೆಯಾದ, ದೇಶದ ನ್ಯಾಯ ಒದಗಣೆಯ ಕುರಿತು ರಾಜ್ಯಗಳ ಶ್ರೇಯಾಂಕದ ಭಾರತದ ಏಕೈಕ ಶ್ರೇಯಾಂಕ ವ್ಯವಸ್ಥೆಯಾದ 2025 ಇಂಡಿಯಾ ಜಸ್ಟಿಸ್ ರಿಪೋರ್ಟ್(IJR), ಭಾರತದ **20.3** ಲಕ್ಷ ಬಲಿಷ್ಟ ಪೋಲಿಸ್ ಪಡೆಯಲ್ಲಿ, ಸೂಪರಿಂಟೆಂಡೆಂಟ್ ಮತ್ತು ಮಹಾನಿರ್ದೇಶಕರು ಮುಂತಾದ ಹಿರಿಯ ಶ್ರೇಯಾಂಕಗಳಲ್ಲಿ**1000**ಕ್ಕಿಂತ ಕಡಿಮೆ ಸಂಖ್ಯೆಯ ಮಹಿಳಾ ಅಧಿಕಾರಿಗಳು ಇದ್ದಾರೆ ಎಂದು ವರದಿ ಮಾಡಿದೆ. ಐಪಿಎಸ್ ಏತರ ಅಧಿಕಾರಿಗಳ ಸಂಖ್ಯೆ ಕೇವಲ 25,000ಕ್ಕಿಂತ ಸ್ವಲ್ಪ ಹೆಚ್ಚಿಗೆ ಇದೆ ಅಷ್ಟೆ. 3.1 ಲಕ್ಷ ಒಟ್ಟೂ ಅಧಿಕಾರಿಗಳ ಪೈಕಿ ಕೇವಲ 8% ಮಹಿಳಾ ಐಪಿಎಸ್ ಏತರ ಅಧಿಕಾರಿಗಳಿದ್ದಾರೆ, 90% ಕಾನ್ಸ್ಟೇಬಲ್ ಹುದ್ದೆಗಳಲ್ಲಿ ಇದ್ದಾರೆ.

ವಿಶಿಷ್ಟವಾದ ನಿಯತಕಾಲಿಕ ವರದಿಯ ಪ್ರಕಾರ **IJR**, ಒಟ್ಟಾರೆಯಾಗಿ ಕರ್ನಾಟಕಕ್ಕೆ ಮೊದಲನೇ ಸ್ಥಾನ ನೀಡಿದೆ. 18 ದೊಡ್ಡ ಮತ್ತು ಮಧ್ಯಮ ಗಾತ್ರದ ರಾಜ್ಯಗಳ ಪೈಕಿ(ತಲಾ ಒಂದು ಕೋಟಿಗಿಂತ ಹೆಚ್ಚಿನ ಜನಸಂಖ್ಯೆ ಹೊಂದಿರುವವವು) ರಾಜ್ಯವು ತನ್ನ ಮೊದಲ ಸ್ಥಾನವನ್ನು ಉಳಿಸಿಕೊಂಡಿದೆ. ಇದರ ನಂತರ, 2022ರಲ್ಲಿ ಐದನೇ ಸ್ಥಾನದಲ್ಲಿದ್ದ ಆಂಧ್ರಪ್ರದೇಶ ಎರಡನೇ ಸ್ಥಾನಕ್ಕೆ ಏರಿದೆ(2022 ಶ್ರೇಯಾಂಕ: 3) ಮತ್ತು ಕೇರಳ (2022 ಶ್ರೇಯಾಂಕ: 6)

ಇತರ ರಾಜ್ಯಗಳಿಗೆ ಹೋಲಿಸಿದರೆ, ಐದು ದಕ್ಷಿಣಾತ್ಯ ರಾಜ್ಯಗಳು, ನಾಲ್ಕು ಸ್ತಂಭಗಳಾದ್ಯಂತ ಉತ್ತಮ ಕಾರ್ಯಕ್ಷಮತೆಯಿಂದಾಗಿ ಪ್ರಾಬಲ್ಯ ಸಾಧಿಸಿದ್ದವು. ಪೋಲಿಸ್( ಕಾನ್ಸ್ಟೇಬಲ್ ಮತ್ತು

India Justice Report | 2025

ಅಧಿಕಾರಿ ಮಟ್ಟದಲ್ಲಿ) ಹಾಗೂ ಜಿಲ್ಲಾ ನ್ಯಾಯಾಂಗದಲ್ಲಿ ತನ್ನ ಜಾತಿ ಕೋಟಾಗಳನ್ನು(ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ) ಪೂರೈಸಿದ ಏಕೈಕ ರಾಜ್ಯ ಕರ್ನಾಟಕ. ಉಚ್ಚ ನ್ಯಾಯಾಲಯ ನ್ಯಾಯಾಧೀಶರುಗಳ ಪೈಕಿ ಕೇರಳ ಅತಿಕಡಿಮೆ ಖಾಲಿ ಸ್ಥಾನ ಹೊಂದಿದೆ. ಅತಿ ಕಡಿಮೆ ಆಕ್ಯುಪೆನ್ಸಿ ಪ್ರಮಾಣಗಳ ಪೈಕಿ ಒಂದಾಗಿ, ಸೆರೆಮನೆಗಳಲ್ಲಿ ತಮಿಳುನಾಡು ಅತ್ಯುತ್ತಮ ಕಾರ್ಯಕ್ಷಮೆ ಪ್ರದರ್ಶಿಸಿದೆ(131%ಗಿಂತ ಹೆಚ್ಚಾಗಿರುವ ರಾಷ್ಟ್ರೀಯ ಸರಾಸರಿಗೆ ಹೋಲಿಸಿದರೆ 77%) .ಪೊಲೀಸ್‌ಗೆ ಸಂಬಂಧಿಸಿದಂತೆ ನಿರ್ದಿಷ್ಟವಾಗಿ, ತೆಲಂಗಾಣ ಮತ್ತು ಆಂಧ್ರಪ್ರದೇಶ ಇತರ ರಾಜ್ಯಗಳಿಗಿಂತ ಉತ್ತಮ ಕಾರ್ಯಕ್ಷಮತೆ ನೀಡಿದೆ. ಆ ಸ್ತಂಭದಲ್ಲಿ ಅವು ಕ್ರಮವಾಗಿ, 1ನೆ ಮತ್ತು 2ನೆ ಶ್ರೇಯಾಂಕ ಗಳಿಸಿವೆ.

ಸಿಕ್ಕಿಂ (2022 ಶ್ರೇಯಾಂಕ: 1), ಏಳು ಸಣ್ಣ ರಾಜ್ಯಗಳ ಪೈಕಿ(ತಲಾ ಒಂದು ಕೋಟಿಗಿಂತ ಕಡಿಮೆ ಜನಸಂಖ್ಯೆ ಇರುವಂಥವು) ಮೊದಲ ಸ್ಥಾನದಲ್ಲಿದ್ದರೆ, ಇದರ ನಂತರದಲ್ಲಿ ಹಿಮಾಚಲ ಪ್ರದೇಶ (2022: 6), ಮತ್ತು ಅರುಣಾಚಲ ಪ್ರದೇಶ (2022: 2) ಬಂದಿದ್ದವು. ಇತರ ರಾಜ್ಯಗಳ ಪೈಕಿ, **IJR 2022** ಮತ್ತು **2025** ನಡುವೆ**,** ಬಿಹಾರ ಅತ್ಯಧಿಕ ಸುಧಾರಣೆ ದಾಖಲಿಸಿತ್ತು**.** ಇದರ ನಂತರದಲ್ಲಿ ಛತ್ತೀಸ್‌ಗಢ ಮತ್ತು ಒದಿಶಾ ಬಂದಿದ್ದವು. ಸುಧಾರಣೆಯ ಸ್ಕೋರ್ ಕಾರ್ಡ್ ಮೇಲೆ ಹರಿಯಾಣ, ತೆಲಂಗಾಣ ಮತ್ತು ಗುಜರಾತ್ ಒಳಗೊಂಡಂತೆ, 7 ಇತರ ರಾಜ್ಯಗಳ ಪೈಕಿ ಉತ್ತರಪ್ರದೇಶ ಮತ್ತು ಉತ್ತರಾಖಂಡ ಕೂಡ ಉತ್ತಮ ಕಾರ್ಯಪ್ರದರ್ಶನ ನೀಡಿತ್ತು. (ಇದನ್ನು ನೋಡಿ*: Improvement Scorecard in Infographics*).

ಪೊಲೀಸ್‌ನಲ್ಲಿ ಮಹಿಳೆಯರು**:** ಅವರೆಲ್ಲಿದ್ದಾರೆ**?**

- ಪೊಲೀಸ್‌ನಲ್ಲಿ ಒಟ್ಟೂ **2,42,835** ಮಹಿಳೆಯರ ಪೈಕಿ, 960 ಐಪಿಎಸ್ ಶ್ರೇಯಾಂಕಗಳೊಳಗೆ ಇದ್ದಾರೆ (ಒಟ್ಟೂ 7,450: DIG, DG, IG, AIGP, Adl SP, ADLSP / Dy. Com)
- **24, 322** ಮಹಿಳೆಯರು ಐಪಿಎಸ್ ಏತರ ಶ್ರೇಯಾಂಕಗಳಲ್ಲಿ ಇದ್ದಾರೆ ( ಒಟ್ಟು 3,10,444: DySP, ಇನ್ಸ್‌ಪೆಕ್ಟರ್, SI ಮತ್ತು ASI)
- **1003** DySPಗಳು ಮಹಿಳೆಯರು (ಒಟ್ಟು 11,406: DySPs ). ಮಧ್ಯಪ್ರದೇಶ ಅತ್ಯಧಿಕ ಸಂಖ್ಯೆಯ DySPಗಳನ್ನು ಹೊಂದಿದೆ: 133.
- **2, 17,553** ಮಹಿಳೆಯರು ಕಾನ್ಸ್‌ಟೇಬಲ್ ಹುದ್ದೆಯಲ್ಲಿ (ಒಟ್ಟು 17, 24,312: ಮುಖ್ಯ ಕಾನ್ಸ್‌ಟೇಬಲ್ ಮತ್ತು ಕಾನ್ಸ್‌ಟೇಬಲ್‌ಗಳು)

ಇಂಡಿಯಾ ಜಸ್ಟಿಸ್ ರಿಪೋರ್ಟ್(IJR)ಅನ್ನು ಟಾಟಾ ಟ್ರಸ್ಟ್ಸ್ ಪ್ರಾರಂಭಿಸಿತ್ತು ಮತ್ತು ಪ್ರಪ್ರಥಮ ಶ್ರೇಯಾಂಕವನ್ನು 2019ನಲ್ಲಿ ಪ್ರಕಾಶಿಸಲಾಗಿತ್ತ. ಇದು ವರದಿಯ ನಾಲ್ಕನೇ ಆವೃತ್ತಿಯಾಗಿದ್ದು, ಸಾಮಾಜಿಕ ನ್ಯಾಯ ಕೇಂದ್ರ, ಕಾಮನ್ ಕಾಸ್, ಕಾಮನ್‌ವೆಲ್ತ್ ಹ್ಯೂಮನ್ ರೈಟ್ಸ್ ಇನಿಶ್‌ಇಯೇಟಿವ್, , DAKSH, TISS–ಪ್ರಯಾಸ್, ವಿಧಿ ಸೆಂಟರ್ ಫಾರ್ ಲೀಗಲ್ ಪಾಲಿಸಿ ಮತ್ತು IJR'ನ ಡೇಟಾ ಭಾಗೀದಾರನಾದ ಹೌ ಇಂಡಿಯಾ ಲಿವ್ಸ್(How India Lives)ನ ಸಹಯೋಗದ ಭಾಗೀದಾರತ್ವದಿಂದ ಇದು ಹೊರಹೊಮ್ಮಿದೆ.

ಇಂಡಿಯಾ ಜಸ್ಟಿಸ್ ರಿಪೋರ್ಟ್ ಕುರಿತು ಚರ್ಚೆ ಮಾಡುತ್ತಾ, ನ್ಯಾಯಮೂರ್ತಿ (ನಿವೃತ್ತ) ಮದನ್ ಬಿ. ಲೋಕೂರ್ ಅವರು, "ನ್ಯಾಯವನ್ನು ಪಡೆದುಕೊಳ್ಳುವ ದಂಡ ಪ್ರಕ್ರಿಯೆಯು ವ್ಯಕ್ತಿಯು ವ್ಯವಸ್ಥೆಯೊಡನೆ ಮೊಟ್ಟಮೊದಲ ಬಾರಿಗೆ ಭೇಟಿಯಾಗುವುದರಿಂದ ಆರಂಭವಾಗುತ್ತದೆ. ಮುನ್ನೆಲೆ ನ್ಯಾಯ ಒದಗಿಸುವವರನ್ನು, ಅಂದರೆ, ಪೋಲಿಸ್ ಠಾಣೆಗಳು, ಕಾನೂನು ನೆರವು ಒದಗಿಸುವವರು, ಮತ್ತು ಜಿಲ್ಲಾ ನ್ಯಾಯಾಲಯಗಳನ್ನು ಸಜ್ಜುಗೊಳಿಸಿ ಅವರನ್ನು ಸರಿಯಾಗಿ ತರಬೇತುಗೊಳಿಸುವ ನಮ್ಮ ವೈಫಲ್ಯದೊಂದಿಗೆ ನಾವು ಸಾರ್ವಜನಿಕ ವಿಶ್ವಾಸವನ್ನು ಮುರಿಯುತ್ತಿದ್ದೇವೆ. ಸಮಾನ ನ್ಯಾಯಕ್ಕೆ ನಮ್ಮ ಬದ್ಧತೆಯನ್ನು ಅಳವಡಿಸಿಕೊಳ್ಳುವುದು ಈ ಸಂಸ್ಥೆಗಳ ಉದ್ದೇಶವಾಗಿರಬೇಕು. ನಮ್ಮ ಇಡೀ ನ್ಯಾಯಾಂಗ ಕಾರ್ಯಚೌಕಟ್ಟಿನ ಬಲವು ಸಂಪರ್ಕದ ಈ ಅತಿಮುಖ್ಯ ಮೊದಲ ಅಂಶಗಳ ಮೇಲೆ ನಿಂತಿದೆ. ಇಂಡಿಯಾ ಜಸ್ಟಿಸ್ ರಿಪೋರ್ಟ್‌ನ ನಾಲ್ಕನೇ ಆವೃತ್ತಿಯು ಸಂಪನ್ಮೂಲಗಳಿಗೆ ಸಮರ್ಪಕ ಗಮನ ಇಲ್ಲದ್ದರಿಂದ ಅತೀಕೆಲವು ಸುಧಾರಣೆಗಳು ಮಾತ್ರ ಏರ್ಪಟ್ಟಿರುವುದನ್ನು ತೋರಿಸುತ್ತದೆ. ದುರಾದೃಷ್ಟವಶಾತ್, ಹೊರೆಯು ನ್ಯಾಯವನ್ನು ಕೋರುತ್ತಿರುವ ವ್ಯಕ್ತಿಯ ಮೇಲೇ ಇದೆಯೇ ಹೊರತು, ರಾಜ್ಯವು ಅದನ್ನು ಒದಗಿಸುತ್ತಿಲ್ಲ." ಎಂದು ಹೇಳಿದರು.

ಇಂಡಿಯಾ ಜಸ್ಟಿಸ್ ರಿಪೋರ್ಟ್‌ನ ಪ್ರಧಾನ ಸಂಪಾದಕಿ ಮಿಸ್ ಮಾಯಾ ದಾರುವಾಲ, "*A*ಭಾರತವು ಪ್ರಜಾಸತ್ತಾತ್ಮಕವಾಗಿರುವ ನೂರು ವರ್ಷಗಳ ಅವಧಿಗೆ ಮುನ್ನಡೆಯುತ್ತಿರುವಂತಹ ಸಂದರ್ಭದಲ್ಲಿ, ಸುಧಾರಿತ ನ್ಯಾಯಾಂಗ ವ್ಯವಸ್ಥೆಯಿಲ್ಲದಿದ್ದರೆ, ಕಾನೂನು ರಾಷ್ಟ್ರದ ನಿಯಮ, ಕಾನೂನು ಮತ್ತು ಸಮಾನ ಹಕ್ಕುಗಳ ನಿಯಮದ ಭರವಸೆಯು ಟೊಳ್ಳಾಗಿಯೇ ಉಳಿಯುತ್ತದೆ. ಸುಧಾರಣೆ ಆಯ್ಕೆಯಲ್ಲ. ಅದು ಅತ್ಯವಸರ. ಉತ್ತಮವಾಗಿ ಸಂಪನ್ಮೂಲವಾದ ನ್ಯಾಯಾಂಗ ವ್ಯವಸ್ಥೆಯು ಸಾಂವಿಧಾನಿಕ ಅವಶ್ಯಕತೆಯಾಗಿದ್ದು, ಇದನ್ನು ಪ್ರತಿಯೊಬ್ಬ ನಾಗರಿಕನಿಗೂ ಲಭ್ಯವಿರುವಂತಹ ಪ್ರತಿನಿತ್ಯದ ವಾಸ್ತವತೆಯಾಗಿ ಅನುಭವಿಸುವ ಅವಕಾಶವಿರಬೇಕು." ಎಂದು ಹೇಳಿದರು.

ಕಠಿಣವಾದ 24-ತಿಂಗಳುಗಳ ಪ್ರಮಾಣೀಯ ಸಂಶೋಧನೆಯ ಮೂಲಕ IJR 2025, ಹಿಂದಿನ ಮೂರು ಆವೃತ್ತಿಗಳಂತೆಯೇ, ರಾಜ್ಯಗಳ ಕಾರ್ಯಕ್ಷಮತೆಯನ್ನು ಟ್ರ್ಯಾಕ್ ಮಾಡಿ, ಕಡ್ಡಾಯ ಸೇವೆಗಳನ್ನು ಪರಿಣಾಮಕಾರಿಯಾಗಿ ಒದಗಿಸಲು ಅವುಗಳ ನ್ಯಾಯಾಂಗ ಒದಗಣೆ ರಚನೆಗಳ ಸಾಮರ್ಥ್ಯವನ್ನು ವಿಶ್ಲೇಷಿಸಿತು. ಧಿಕೃತ ಸರ್ಕಾರಿ ಮೂಲಗಳಿಂದ ಪಡೆದುಕೊಂಡ ಇತ್ತೀಚಿನ ಅಧಿಕೃತ ಅಂಕಿಅಂಶಗಳ ಆಧಾರದ ಮೇಲೆ ಅದು ನ್ಯಾಯಾಂಗ ಒದಗಣೆಯ ನಾಲ್ಕು ಸ್ತಂಭಗಳಾದ ಪೋಲಿಸ್, ನ್ಯಾಯಾಂಗ, ಸೆರೆಮನೆ ಹಾಗೂ ಕಾನೂನು ನೆರವಿನ ಕುರಿತಾದ ಪ್ರತ್ಯೇಕಗೊಳಿಸಿರಬಹುದಾದ, ಪ್ರವೇಶಾವಕಾಶವಿಲ್ಲದಿರಬಹುದಾದ ಡೇಟಾವನ್ನು ಒಟ್ಟಿಗೆ ತರುತ್ತದೆ. ಪ್ರತಿಯೊಂದು ಸ್ತಂಭವನ್ನೂ, ರಾಜ್ಯದ ಸ್ವಂತ ಘೋಷಿತ ಮಾನದಂಡಗಳು ಹಾಗೂ ಸ್ಥಿಗತಿಗಳ ವಿರುದ್ಧ, ಬಜೆಟ್‌ಗಳು, ಮಾನವ ಸಂಪನ್ಮೂಲಗಳು, ಕೆಲಸದಹೊರೆ, ವೈವಿಧ್ಯತೆ, ಮೂಲಸೌಕರ್ಯ ಮತ್ತು ಪ್ರವೃತ್ತಿಗಳ (ಐದು-ವರ್ಷ ಅವಧಿಯಲ್ಲಿ ಸುಧಾರಿಸುವ ಉದ್ದೇಶ) ಹೋಲಿಸುವ ತ್ರಿಭುಜದ ಮೂಲಕ ವಿಶ್ಲೇಷಿಸಲಾಗಿತ್ತು. ಈ ಆವೃತ್ತಿಯು, 25 ರಾಜ್ಯ ಮಾನವ ಹಕ್ಕುಗಳ ಆಯೋಗಗಳ (ಹೆಚ್ಚಿನ ವಿವರಗಳಿಗೆ *SHRC brief* ನೋಡಿ) ಸಾಮರ್ಥ್ಯವನ್ನು ಕೂಡ ಪ್ರತ್ಯೇಕವಾಗಿ ವಿಶ್ಲೇಷಿಸುತ್ತದೆ ಮತ್ತು ವೈಕಲ್ಯವಿರುವ ಜನರಿಗಾಗಿ ನ್ಯಾಯಕ್ಕೆ ಮಧ್ಯಸ್ಥಿಕೆ ಮತ್ತು ಪ್ರವೇಶಾವಕಾಶದ ಕುರಿತಾದ ಪ್ರಬಂಧಗಳನ್ನೂ ಒಳಗೊಂಡಿದೆ.

**18** ದೊಡ್ಡ ಮತ್ತು ಮಧ್ಯಮ-ಗಾತ್ರದ ರಾಜ್ಯಗಳ ಶ್ರೇಯಾಂಕ:

India Justice Report | 2025

| ರಾಜ್ಯ | ಶ್ರೇಯಾಂಕ 2025 | ಶ್ರೇಯಾಂಕ 2022 |
|---|---|---|
| ಕರ್ನಾಟಕ | 1 | 1 |
| ಆಂಧ್ರಪ್ರದೇಶ | 2 | 5 |
| ತೆಲಂಗಾಣ | 3 | 3 |
| ಕೇರಳ | 4 | 6 |
| ತಮಿಳುನಾಡು | 5 | 2 |
| ಛತ್ತೀಸ್‌ಗಢ | 6 | 9 |
| ಮಧ್ಯಪ್ರದೇಶ | 7 | 8 |
| ಒದಿಶಾ | 8 | 11 |
| ಪಂಜಾಬ್ | 9 | 10 |
| ಮಹಾರಾಷ್ಟ್ರ | 10 | 12 |
| ಗುಜರಾತ್ | 11 | 4 |
| ಹರಿಯಾಣ | 12 | 13 |
| ಬಿಹಾರ | 13 | 16 |
| ರಾಜಸ್ಥಾನ | 14 | 15 |
| ಝಾರ್ಖಂಡ್ | 15 | 7 |
| ಉತ್ತರಾಖಂಡ | 16 | 14 |
| ಉತ್ತರಪ್ರದೇಶ | 17 | 18 |
| ಪಶ್ಚಿಮ ಬಂಗಾಳ | 18 | 17 |

ಏಳು ಸಣ್ಣ ರಾಜ್ಯಗಳ ಶ್ರೇಯಾಂಕ :

| ರಾಜ್ಯ | ಶ್ರೇಯಾಂಕ 2025 | ಶ್ರೇಯಾಂಕ 2022 |
|---|---|---|
| ಸಿಕ್ಕಿಂ | 1 | 1 |
| ಹಿಮಾಚಲ ಪ್ರದೇಶ | 2 | 6 |
| ಅರುಣಾಚಲಪ್ರದೇಶ | 3 | 2 |
| ತ್ರಿಪುರ | 4 | 3 |
| ಮೇಘಾಲಯ | 5 | 4 |
| ಮಿಜೋರಮ್ | 6 | 5 |
| ಗೋವಾ | 7 | 7 |

ಪ್ರೋತ್ಸಾಹದಾಯಕ ಸುಧಾರಣೆಗಳು, ಆದರೆ ಸತತ ಅಂತರಗಳು:

<u>ಖಾಲಿಸ್ಥಾನ:</u>

ನ್ಯಾಯಾಂಗ: 1.4 ಬಿಲಿಯನ್ ಜನರಿಗೆ, ಭಾರತವು 21,285 ನ್ಯಾಯಾಧೀಶರನ್ನು ಅಥವಾ ಪ್ರತಿ ದಶಲಕ್ಷ ಜನಸಂಖ್ಯೆಗೆ ಸರಿಸುಮಾರು **15** ನ್ಯಾಯಾಧೀಶರನ್ನು ಹೊಂದಿದೆ**.** ಇದು, ಪ್ರತಿ ದಶಲಕ್ಷ ಜನಸಂಖ್ಯೆಗೆ 50 ನ್ಯಾಯಾಧೀಶರು ಇರಬೇಕೆಂಬ 1987 ಕಾನೂನು ಆಯೋಗದ ಶಿಫಾರಸ್ಸಿಗಿಂತ ಗಣನೀಯವಾಗಿ ಕಡಿಮೆ ಇದೆ. ಉಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳ ಖಾಲಿ ಸ್ಥಾನ **33%**ನಲ್ಲಿದ್ದರೆ**,** ಜಿಲ್ಲಾ ನ್ಯಾಯಾಲಯದಲ್ಲಿ **21%** ಇದೆ. ಅಂದರೆ, ಉಚ್ಚ ನ್ಯಾಯಾಲಯಗಳಲ್ಲಿ ವಿಶೇಷವಾಗಿ, ನ್ಯಾಯಾಧೀಶರುಗಳಿಗೆ ಹೆಚ್ಚಿನ ಕೆಲಸದ ಹೊರೆ ಇರುತ್ತದೆ ಎಂದಾಗುತ್ತದೆ. ಉದಾಹರಣೆಗೆ, ಅಲಹಾಬಾದ್ ಮತ್ತು ಮಧ್ಯಪ್ರದೇಶದ ಉಚ್ಚ ನ್ಯಾಯಾಲಯಗಳಲ್ಲಿ ಪ್ರತಿ ನ್ಯಾಯಾಧೀಶನ ಕೇಸ್ ಹೊರೆ ಪ್ರಮಾಣವು 15,000 ಕೇಸ್‌ಗಳಿವೆ. ರಾಷ್ಟ್ರೀಯವಾಗಿ, ಜಿಲ್ಲಾ ನ್ಯಾಯಾಲಯಗಳಲ್ಲಿ ಸರಾಸರಿ ಕೆಲಸದ ಹೊರೆ ಪ್ರತಿ ನ್ಯಾಯಾಧೀಶನಿಗೆ **2,200** ಕೇಸ್‌ಗಳಾಗಿರುತ್ತದೆ.

ಪೋಲಿಸ್: **28%** ಅಧಿಕಾರಿ ಖಾಲಿಸ್ಥಾನ ಮತ್ತು **21%** ಕಾನ್ಸ್ಟೇಬಲ್ ಖಾಲಿಸ್ಥಾನದೊಂದಿಗೆ**,** ರಾಷ್ಟ್ರೀಯ ಪೋಲಿಸ್ ಮತ್ತು ಜನಸಂಖ್ಯೆ ಅನುಪಾತ 831 ಇದೆ. ಸೂಚಿಸಲಾಗಿರುವ ಅಂತರರಾಷ್ಟ್ರೀಯ ಮಾನದಂಡವು ಪ್ರತಿ ಲಕ್ಷ ಜನಸಂಖ್ಯೆಗೆ 222 ಪೋಲಿಸ್ ಸಿಬ್ಬಂದಿ ಆಗಿದ್ದರೆ ಭಾರತದಲ್ಲಿ ಪ್ರತಿ ಒಂದು ಲಕ್ಷ ಜನಸಂಖ್ಯೆಗೆ ಕೇವಲ **120** ಪೋಲಿಸ್ ಸಿಬ್ಬಂದಿ ಲಭ್ಯವಿದ್ದಾರೆ (ವಾಸ್ತವ ಲಭ್ಯತೆಯ ಪ್ರಕಾರ).

ಸೆರೆಮನೆಗಳು: **28%** ಅಧಿಕಾರಿ ವರ್ಗದಲ್ಲಿ ಖಾಲಿಸ್ಥಾನ**,** **28%** ಕೇಡರ್ ಸಿಬ್ಬಂದಿಯಲ್ಲಿ ಮತ್ತು **44%** ಸುಧಾರಣಾ ಸಿಬ್ಬಂದಿಯಲ್ಲಿ ಖಾಲಿ ಸ್ಥಾನಗಳೊಂದಿಗೆ**,** ಸೆರೆಮನೆ ಸಿಬ್ಬಂದಿಯಲ್ಲಿ ಅಧಿಕ ಖಾಲಿಸ್ಥಾನಗಳಿರುವುದು ಆತಂಕದ ವಿಷಯವೇ ಆಗಿದೆ. **43%** ವೈದ್ಯಕೀಯ ಅಧಿಕಾರಿಗಳ ಖಾಲಿಸ್ಥಾನವಿದೆ**.** ಮಾದರಿ ಸೆರೆಮನೆ ಕೈಪಿಡಿ (Model Prison Manual (2016) ಮಾನದಂಡಗಳ ಪ್ರಕಾರ ಖೈದಿ-ವೈದ್ಯ ಅನುಪಾತವು 1 ವೈದ್ಯರಿಗೆ 300 ಖೈದಿಗಳಿರಬೇಕಾಗಿದ್ದರೆ, ಭಾರತದ ರಾಷ್ಟ್ರೀಯ ಸರಾಸರಿ ಪ್ರತಿ ಒಬ್ಬ ವೈದ್ಯನಿಗೆ **775** ಖೈದಿಗಳಿದ್ದಾರೆ**.** ಹಾಗೆ ನೋಡಿದರೆ, ಛತ್ತೀಸ್‌ಗಢ, ಹೈರ್ಯಾಣ, ಉತ್ತರಾಖಂಡ, ಹಾಗೂ ಪಶ್ಚಿಮ ಬಂಗಾಳ ಒಳಗೊಂಡಂತೆ, ಹಲವಾರು ರಾಜ್ಯಗಳಲ್ಲಿ ಒಬ್ಬ ವೈದ್ಯರಿಗ್ 1,000ಕ್ಕಿಂತ ಹೆಚ್ಚಿನ ಖೈದಿಗಳಿದ್ದಾರೆ.

ಫೊರೆನ್ಸಿಕ್ಸ್: ಫೊರೆನ್ಸಿಕ್ಸ್ ಒಳಗೇ, ಆಡಳಿತ ಸಿಬ್ಬಂದಿ ಖಾಲಿಸ್ಥಾನ **47%,** ಮತ್ತು ವೈಜ್ಞಾನಿಕ ಸಿಬ್ಬಂದಿಯ ಖಾಲಿಸ್ಥಾನ **49%** ಇದೆ**.**

ಪ್ಯಾರಾಲೀಗಲ್ ಸ್ವಯಂಸೇವಕರು ಅಥವಾ *PLVs*: 2019 ಮತ್ತು 2024 ನಡುವೆ ಸಮುದಾಯ-ಆಧಾರಿತ PLVಗಳ ಸಂಖ್ಯೆ **38%**ಗೆ ಇಳಿದಿದೆ**.** ತಮಿಳುನಾಡು, ರಾಜಸ್ಥಾನ ಮತ್ತು ಪಂಜಾಬ್ ಅತ್ಯಧಿಕ ಇಳಿಕೆಗಳನ್ನು ವರದಿ ಮಾಡಿವೆ. ಈಗ, ಪ್ರತಿ ಒಂದು ಲಕ್ಷ ಜನಸಂಖ್ಯೆಗೆ ಕೇವಲ **3 PLV**ಗಳಿದ್ದಾರೆ**.** ರಾಷ್ಟ್ರೀಯವಾಗಿ, ತರಬೇತಿ ಪಡೆದುಕೊಂಡ 53,000ಕ್ಕಿಂತ ಹೆಚ್ಚಿನ PLVಗಳ ಪೈಕಿ ಕೇವಲ ಮೂರನೇ ಒಂದು ಭಾಗವನ್ನು ವಾಸ್ತವವಾಗಿ ನಿಯೋಜಿಸಲಾಗಿತ್ತು

<u>ಮೂಲಸೌಕರ್ಯ</u>**:**

ಕೆಲವೊಂದು ಮೂಲಸೌಕರ್ಯ ಸೌಲಭ್ಯಗಳಲ್ಲಿ ಸುಧಾರಣೆಯಾಗಿದೆ. ವೀಡಿಯೋ ಸಮಾವೇಶ ಸೌಲಭ್ಯಗಳಿರುವ ಸೆರೆಮನೆಗಳ ಪಾಲಿನಲ್ಲಿ ಹೆಚ್ಚಳಿಕೆಯಾಗಿದೆ **(86%),** ಕೋರ್ಟ್‌ಹಾಲ್ ಕೊರತೆ

ಸ್ವಲ್ಪ ಮಟ್ಟಿಗೆ ಕಡಿಮೆಯಾಗಿದೆ **(14.5%),** ಸಿಸಿಟಿವಿ ಇರುವ ಪೋಲಿಸ್ ಠಾಣೆಗಳ ಪಾಲು ಸುಧಾರಿಸಿದೆ**(83%)** ಮತ್ತು ಪ್ರತಿ ಸೆರೆಮನೆಗೆ ಕಾನೂನು ಸೇವಾ ಚಿಕಿತ್ಸಾಲಯಗಳು ಸುಧಾರಣೆಯಾಗಿವೆ (1,330 ಸೆರೆಮನೆಗಳಾದ್ಯಂತ 1,215 ಚಿಕಿತ್ಸಾಲಯಗಳು 1,330). ಗ್ರಾಮಗಳಲ್ಲಿ ಕಾನೂನು ಸೇವಾ ಕೇಂದ್ರಗಳ ಇಳಿಕೆಯಾಗಿದೆ (2017ರಲ್ಲಿ ಪ್ರತಿ ಚಿಕಿತ್ಸಾಲಯಕ್ಕೆ 42 ಗ್ರಾಮಗಳಿಂದ 2024ನಲ್ಲಿ ಕೇವಲ 163ಗೆ). ಅಖಿಲ ಭಾರತವಾಗಿ, ಜನವರಿ 2017 ಮತ್ತು ಜನವರಿ 2023 ನಡುವೆ, ಗ್ರಾಮೀಣ ಪೋಲಿಸ್ ಠಾಣೆಗಳು 735ಗೆ ಇಳಿದಿದ್ದರೆ, ನಗರ ಪೋಲಿಸ್ ಠಾಣೆಗಳ ಸಂಖ್ಯೆ **193**ಗೆ ಹೆಚ್ಚಾಗಿದೆ**.**

ರಾಷ್ಟ್ರೀಯವಾಗಿ, ಸೆರೆಮನೆಗಳಲ್ಲಿ ಮೂಲಸೌಕರ್ಯಗಳ ಕೊರತೆ ಕಣ್ಣಿಗೆ ಕಾಣುವಂತಿವೆ. ಭಾರತದ ಸೆರೆಮನೆಗಳು ಅತಿಯಾಗಿ ತುಂಬಿದ್ದು, ರಾಷ್ಟ್ರೀಯ ಸರಾಸರಿ ನೆಲೆಸಿರುವಿಕೆ **131%**ಗಿಂತ ಹೆಚ್ಚಾಗಿದೆ**.** 2022ರಲ್ಲಿ ಇದ್ದಂತೆ, ಉತ್ತರಪ್ರದೇಶದ ಪ್ರತಿ ಮೂರು(3) ಸೆರೆಮನೆಗಳ ಪೈಕಿ ಒಂದು(1) 250%ಗಿಂತ ಹೆಚ್ಚಿನ ನೆಲೆಸಿರುವಿಕೆ ಪ್ರಮಾಣ ದಾಖಲಿಸಿತ್ತು. ತನ್ನ ಪ್ರಸ್ತುತದ ಪ್ರಮಾಣದಲ್ಲಿ, ಭಾರತದ ಸೆರೆಮನೆ ವಾಸಿ ಜನಸಂಖ್ಯೆ 2030ರ ವೇಳೆಗೆ6.8 ಲಕ್ಷ ತಲುಪುತ್ತದೆ ಎಂದು ಸೂಚಿಸಲಾಗಿದ್ದರೆ, ಅದರ ಸೆರೆಮನೆ ಸಾಮರ್ಥ್ಯವು, ಈಗಿರುವ ಸಾಮರ್ಥ್ಯದ ಪ್ರಮಾಣದಲ್ಲಿ 5.15 ಲಕ್ಷಕ್ಕೆ ಬೆಳೆಯಬಹುದು ಎಂದು ಅಂದಾಜಿಸಲಾಗಿದೆ.

ಮೂರನೇ ಒಂದು ಖೈದಿಗಳು **(76%)** ವಿಚಾರಣಾಧೀನ ಖೈದಿಗಳಾಗಿದ್ದಾರೆ**.** ದೊಡ್ಡ ಪಾಲಿನ ವಿಚಾರಣಾಖೈದಿಗಳು ಸೆರೆಮನೆಗಳಲ್ಲಿ ಕಾಲಕಳೆಯುತ್ತಿದ್ದು, 3-5 ವರ್ಷಗಳ ನಡುವಿನಿಂದ ಸೆರೆಮನೆಗಳಲ್ಲೇ ಇರುತ್ತಿರುವ ಖೈದಿಗಳ ಪಾಲು 2012 ರಲ್ಲಿ ಇದ್ದ 3.4% ನಿಂದ 2022ದಲ್ಲಿ 6%ಗೆ ಏರಿದೆ. ಮೇಲಾಗಿ, 5 ವರ್ಷಗಳಿಗಿಂತ ಹೆಚ್ಚಿನ ಕಾಲದಿಂದ ಸೆರೆಮನೆಯಲ್ಲಿರುವವರ ಸಂಖ್ಯೆ ತ್ರಿಗುಣಗೊಂಡಿದ್ದು, ಇದೇ ಅವಧಿಯಲ್ಲಿ 0.8% ನಿಂದ 2.6%ಗೆ ಹೆಚ್ಚಿದೆ

**UTRC**ಗಳ ಕಾರ್ಯಕ್ಷಮತೆ: 2019 ಮತ್ತು 2023 ನಡುವಿನ ಡೇಟಾ, ರಾಜ್ಯಗಳಾದ್ಯಂತ ಕಾರ್ಯಕ್ಷಮತೆಯಲ್ಲಿ ಮಹತ್ತರವಾದ ಬದಲಾವಣೆಗಳನ್ನು ತೋರಿಸಿದೆ. ಸಮಿತಿಗಳು, ದೇಶಾದ್ಯಂತ ಸರಿಸುಮಾರು 2.5 ಲಕ್ಷ ಖೈದಿಗಳ ಬಿಡುಗಡೆಯನ್ನು ಶಿಫಾರಸು ಮಾಡಿದ್ದು, ಬಿಡುಗಡೆಯ ಮಧ್ಯಂತರ ಪ್ರಮಾಣವು 47 ಶೇಕಡದಲ್ಲಿದೆ.

<u>ವೈವಿಧ್ಯತೆ:</u>

**SC/ST/OBC: 59%** ಪೋಲಿಸ್ ಸಿಬ್ಬಂದಿ**,** ಎಸ್‌ಸಿ**,** ಎಸ್‌ಟಿ ಅಥವಾ ಒಬಿಸಿ ವರ್ಗಗಳಿಂದ ಬಂದವರಾಗಿದ್ದಾರೆ**.** ಆದರೂ, ಶ್ರೇಯಾಂಕ-ವಾರು ಅಂತರವು ಅಧಿಕವಾಗಿದೆ. **61%** ಕಾನ್ಸ್‌ಟೇಬಲ್ ವರ್ಗದ ಹುದ್ದೆಯು ಪ.ಜಾ., ಪ.ವ, ಅಥವಾ ಇತರ ಹಿಂದುಳಿದ ವರ್ಗಗಳ ಜಾರಿಯ ವರ್ಗಗಳಿಂದ ಬಂದ ಸಿಬ್ಬಂದಿಯನ್ನು ಒಳಗೊಂಡಿದ್ದರೂ, ಡಿವೈಎಸ್‌ಪಿ ಮುಂತಾದ ಹಿರಿಯ ಸ್ಥಾನಗಳಲ್ಲಿ ಅವರ ಪಾಲು **16%**ಗೆ ಇಳಿದಿದೆ**.**

ನ್ಯಾಯಾಧೀಶರು**:** ಜಿಲ್ಲಾ ನ್ಯಾಯಾಂಗದಲ್ಲಿ**,** ಕೇವಲ **5%** ನ್ಯಾಯಾಧೀಶರುಗಳು ಪ**.**ವ**.**ಕ್ಕೆ ಸೇರಿದ್ದರೆ **14%** ಪ.ಜಾ**.** ಯಿಂದ ಬಂದವರಾಗಿದ್ದಾರೆ**.** 2018ರಿಂದಲೂ ನೇಮಕಗೊಂಡಿರುವ 698 ಉಚ್ಚನ್ಯಾಯಾಲಯ ನ್ಯಾಯಮೂರ್ತಿಗಳ ಪೈಕಿ, ಕೇವಲ **37** ನ್ಯಾಯಮೂರ್ತಿಗಳು ಮಾತ್ರ ಪ.ಜಾ**.** ಮತ್ತು ಪ.ವ**.**ದಿಂದ ಬಂದವರಾಗಿದ್ದಾರೆ**.**

ಲಿಂಗ**:** ವೈವಿಧ್ಯತೆಯ ಮೇಲಿನ ವರ್ಧಿತ ಗಮನ ಕೇಂದ್ರೀಕರಣದೊಂದಿಗೆ ಪೋಲಿಸ್‌ನಲ್ಲಿ ಮಹಿಳೆಯರ ಪಾಲು ಸುಮಾರಾಗಿ**12%**ನಷ್ಟು ಹೆಚ್ಚಾಗಿದ್ದರೂ**,** ಅಧಿಕಾರಿ ಮಟ್ಟದಲ್ಲಿ ಅದು ಕೇವಲ **8%**ನಲ್ಲೇ ನಿಂತುಬಿಟ್ಟಿದೆ**.** ಒಟ್ಟೂ ಮಹಿಳಾ ಪೋಲಿಸ್ ಪಡೆಯ **89%** ಕಾನ್ಸ್‌ಟೇಬಲ್ ಹುದ್ದೆಯೊಳಗೇ ಬರುತ್ತಾರೆ**.**

ಉಚ್ಛ ನ್ಯಾಯಾಲ್ಯಗಳು **(14%)** ಮತ್ತು ಸರ್ವೋಚ್ಛ ನ್ಯಾಯಾಲಯಕ್ಕೆ**(6%)** ಹೋಲಿಸಿದರೆ**,** ಜಿಲ್ಲಾ ನ್ಯಾಯಾಲಯದಲ್ಲಿ ಮಹಿಳಾ ನ್ಯಾಯಾಧೀಶರುಗಳ ಪಾಲು ಕೂಡ ಅಧಿಕವಾಗಿದೆ **(38%).** ಪ್ರಸ್ತುತ**,** **25** ಉಚ್ಛ ನ್ಯಾಯಾಲ್ಯಗಳಾದ್ಯಂತ ಕೇವಲ ಒಬ್ಬ ಒಬ್ಬ ಮಹಿಳಾ ಚೀಫ್ ಜಸ್ಟಿಸ್ ಮಾತ್ರ ಇದ್ದಾರೆ**.**

<u>ನ್ಯಾಯಕ್ಕೆ ಬಜೆಟ್‌ಗಳು:</u>

ಕಾನೂನು ನೆರವಿನ ಮೇಲಿನ ತಲಾವಾರು ವ್ಯಯ ರೂ. **7** ತಲುಪಲು ಹೆಣಗುತ್ತಿದ್ದರೂ ಪೋಲಿಸ್ ಮೇಲಿನ ವ್ಯಯವು ಕಳೆದ **6** ವರ್ಷಗಳಲ್ಲಿ **55%** ಬೆಳೆದಿದ್ದು**,** ರಾಷ್ಟ್ರೀಯ ಸರಾಸರಿಯು ಈಗ **Rs. 1300** ತಲುಪುತ್ತಿದೆ**.** ಆದರೆ ತರಬೇತಿ ಮೇಲಿನ ವ್ಯಯವು ತೀರಾ ಕಡಿಮೆಯೇ ಇದ್ದು, ಪೋಲಿಸ್ ಬಜೆಟ್‌ನಲ್ಲಿ ತರಬೇತಿ ಬಜೆಟ್‌ನ ರಾಷ್ಟ್ರ ಸರಾಸರಿ ಪಾಲು **1.25%**ನಲ್ಲಿದೆ**.**

- ಕಾನೂನು ನೆರವು**:** ಕಾನೂನು ನೆರವಿನ ಮೇಲೆ ರಾಷ್ಟ್ರೀಯ ತಲಾವಾರು ವ್ಯಯವು ಅತ್ಯಲ್ಪವಾದ ವಾರ್ಷಿಕ ರೂ**. 6.46** ಇದೆ

- ಸೆರೆಮನೆಗಳು**:** ಸೆರೆಮನೆಗಳ ಮೇಲೆ ರಾಷ್ಟ್ರೀಯ ತಲಾವಾರು ವ್ಯಯ ರೂ**. 57**. 2021-22ದಲ್ಲಿ ರೂ. 38,028 ಇದ್ದ ಪ್ರತಿ ಖೈದಿಯ ರಾಷ್ಟ್ರೀಯ ತಲಾವಾರು ವ್ಯಯ 2022-23ನಲ್ಲಿ, ರೂ.44,110ಗೆ ಏರಿತ್ತು. ರೂ. ದಿಂದ ರೂ. 2,67,673ದೊಂದಿಗೆ ಆಂಧ್ರ ಪ್ರದೇಶ ಅತ್ಯಧಿಕ ವಾರ್ಷಿಕ ವ್ಯಯ ದಾಖಲಿಸಿದೆ.

- ನ್ಯಾಯಾಂಗ**:** Tನ್ಯಾಯಾಂಗದ ಮೇಲೆ ರಾಷ್ಟ್ರೀಯ ತಲಾವಾರು ವ್ಯಯ ರೂ. **182** ಆಗಿದೆ**.** ಯಾವುದೇ ರಾಜ್ಯವೂ ಕೂಡ ತನ್ನ ಒಟ್ಟೂ ವಾರ್ಷಿಕ ವೆಚ್ಚಗಳ ಶೇಕಡ ಒಂದಕ್ಕಿಂತ ಹೆಚ್ಚಿಗೆ ನ್ಯಾಯಾಂಗದ ಮೇಲೆ ವ್ಯಯಿಸುತ್ತಿಲ್ಲ.

- ಪೋಲಿಸ್**:** ಪೋಲಿಸ್ ಮೇಲೆ ರಾಷ್ಟ್ರೀಯ ತಲಾವಾರು ವ್ಯಯ ರೂ. **1,275** ಆಗಿದ್ದು ಇದು**,** ನಾಲ್ಕು ಸ್ತಂಭಗಳ ಪೈಕಿ ಅತ್ಯಧಿಕವಾಗಿದೆ.

IJR 2025, ತಕ್ಷಣದ ಹಾಗೂ ಮೂಲಭೂತ ಸರಿಪಡಿಸುವಿಕೆ ಎರಡನ್ನೂ ಒತ್ತಿಹೇಳಿದೆ. ಖಾಲಿಸ್ಥಾನಗಳ ತುರ್ತು ಭರ್ತಿ ಮತ್ತು ಹೆಚ್ಚಿನ ಪ್ರತಿನಿಧಿತ್ವವನ್ನು ಅದು ಪ್ರಧಾನವಾಗಿ ಗುರುತಿಸಿದೆ. ಅಪರಿವರ್ತನೀಯ ಬದಲಾವಣೆಯನ್ನು ಜಾರಿಗೊಳಿಸಲು ಅದು ನ್ಯಾಯ ಒದಗಣೆಯನ್ನು ಅತ್ಯಾವಶ್ಯಕ ಸೇವೆ ಎಂದು ನಿಯೋಜಿಸಬೇಕೆಂದು ಆಗ್ರಹಿಸಿದೆ.

**---------**

ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಸಂಪರ್ಕಿಸಿ**:**

ವಲಯ್ ಸಿಂಗ್
ಇಂಡಿಯಾ ಜಸ್ಟಿಸ್ ರಿಪೋರ್ಟ್ (indiajusticereport.org)
ಇ-: valaysingh@gmail.com
ಮೊ: 9717676026

ಮೂಲಗಳು:

1. **ಪೋಲಿಸ್: *Data on Police Organisation 2023,* Bureau of Police Research and Development**

2. **ಸೆರೆಮನೆಗಳು*: Prison Statistics India 2022,* National Crime Records Bureau**

3. **ನ್ಯಾಯಾಂಗ: 2024 & 2025- National Judicial Data Grid (NJDG), Court News, Supreme Court of India; eCourts Services; Websites and annual reports of High Courts, Department of Justice**

4. **ಕಾನೂನು ನೆರವು: 2024, Statistics from National Legal Services Authority**

## ಅನುಬಂಧ I:

## ಒಟ್ಟಾರೆ ರಾಷ್ಟ್ರೀಯ ಶೋಧಗಳು:ಒಂದು ಪಕ್ಷಿನೋಟ

***ಖಾಲಿಸ್ಥಾನಗಳು:***
ರಾಷ್ಟ್ರೀಯವಾಗಿ, ನ್ಯಾಯಾಂಗ ವ್ಯವಸ್ಥೆಯಲ್ಲಿರುವ ಖಾಲಿಸ್ಥಾನಗಳು ಹೀಗಿವೆ:

- **ಪೋಲಿಸ್**: 21% (ಕಾನ್ಸ್‌ಟೇಬಲ್‌ಗಳು); 28% (ಅಧಿಕಾರಿಗಳು)
- **ಸೆರೆಮನೆಗಳು**: 28% (ಅಧಿಕಾರಿಗಳು), 28% (ವರ್ಗ ಸಿಬ್ಬಂದಿ), 44% (ತಿದ್ದುಪಡಿ ಸಿಬ್ಬಂದಿ), 40% (ವೈದ್ಯಕೀಯ ಸಿಬ್ಬಂದಿ), 43% (ವೈದ್ಯಾಧಿಕಾರಿಗಳು)
- **ನ್ಯಾಯಾಂಗ**: 33% (ಉಚ್ಚನ್ಯಾಯಾಲಯ ನ್ಯಾಯಾಧೀಶರುಗಳು), 21% (ಜಿಲ್ಲಾ ನ್ಯಾಯಾಲಯ ನ್ಯಾಯಾಧೀಶರುಗಳು), 27% (ಉಚ್ಚನ್ಯಾಯಾಲಯ ಸಿಬ್ಬಂದಿ)
- **ಕಾನೂನು ನೆರವು**: 6% (ಡಿಎಲ್‌ಎಸ್‌ಎ ಕಾರ್ಯದರ್ಶಿ)

**ಸುಧಾರಣೆಗಳು:**

- **ಪೋಲಿಸ್:** ಬಿಹಾರದಲ್ಲಿ ಕಾನ್ಸ್‌ಟೇಬಲ್ 30% ನಿಂದ 23%ಗೆ, ಮತ್ತು ಕರ್ನಾಟಕದಲ್ಲಿ ಅಧಿಕಾರಿಗಳು 11%ನಿಂದ 1.2%ಗೆ
- **ಸೆರೆಮನೆಗಳು:** ವೈದ್ಯಾಧಿಕಾರಿಗಳ ಪೈಕಿ ಮಧ್ಯಪ್ರದೇಶ72%ನಿಂದ 31%ಗೆ ಮತ್ತು ಅಧಿಕಾರಿಗಳ ಪೈಕಿ ಉತ್ತರಪ್ರದೇಶ 36%ನಿಂದ 25%ಗೆ
- **ನ್ಯಾಯಾಂಗ:** ಜಿಲ್ಲಾ ನ್ಯಾಯಾಲಯ ನ್ಯಾಯಾಧೀಶರುಗಳು ಪೈಕಿ ಪುದುಚೇರಿ 58%ನಿಂದ 28%ಗೆ, ಮತ್ತು ಉಚ್ಚನ್ಯಾಯಾಲಯ ನ್ಯಾಯಾಧೀಶರುಗಳ ಪೈಕಿ ತ್ರಿಪುರ 40 %ನಿಂದ ಬಾಕಿ ಏನೂ ಇಲ್ಲ.
- **ಕಾನೂನು ನೆರವು:** ಅರುಣಾಚಲ ಪ್ರದೇಶ ಡಿಎಲ್‌ಎಸ್‌ಎ ಕಾರ್ಯದರ್ಶಿಗಳು 100%ನಿಂದ ಏನೂ ಬಾಕಿ ಇಲ್ಲ

***ವೈವಿಧ್ಯತೆ***
***SC/ST/OBC ಪ್ರತಿನಿಧಿತ್ವ:***

- ಪೋಲಿಸ್‌ನಲ್ಲಿ ಪಾಲು: **OBC**: 31%, **SC**: 17%, **ST**: 12%
- ನ್ಯಾಯಾಂಗದಲ್ಲಿ ಪಾಲು: OBC: 25.6%, **SC**: 14%, **ST**: 5%
- ಪೋಲಿಸ್ ಅಧಿಕಾರಿಗಳು ಹಾಗೂ ಕಾನ್‌ಸ್‌ಟೇಬಲ್ ಹುದ್ದೆಗಳೆರಡರಲ್ಲೂ ಪ.ಜಾ. ಪ.ವ. ಹಾಗೂ ಇ.ಹಿ.ಜಾ.ಗಾಗಿ ತನ್ನ ಕೋಟಾವನ್ನು ಪೂರೈಸಿದ ಏಕೈಕ ರಾಜ್ಯ ಕರ್ನಾಟಕ.

India Justice Report | 2025

***ನ್ಯಾಯ ವ್ಯವಸ್ಥೆಯಲ್ಲಿ ಮಹಿಳೆಯರು: ಇಂಡಿಯಾ ಜಸ್ಟಿಸ್ ವರದಿಯ 5 ವರ್ಷಗಳಲ್ಲಿ ಬದಲಾವಣೆ***

**ಪೋಲಿಸ್:**

- ಪೋಲಿಸ್‌ನಲ್ಲಿ ಮಹಿಳೆಯರ ಒಟ್ಟಾರೆ ಪಾಲು 2016ನಲ್ಲಿದ್ದ 7.28%ನಿಂದ 2022ದಲ್ಲಿ 12.32%ಗೆ ಏರಿದೆ.
- ಇದೇ ಅವಧಿಯಲ್ಲಿ, ಅಧಿಕಾರಿ ಮಟ್ಟದಲ್ಲಿ 5.5%ನಿಂದ 7.9%ಗೆ ಏರಿದೆ
- 2022ನಲ್ಲಿ ಐಪಿಎಸ್ ಶ್ರೇಣಿಯ ಮಹಿಳೆಯರ ಸಂಖ್ಯೆ: 960
- 15 ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳಲ್ಲಿ ಪೋಲಿಸ್‌ನಲ್ಲಿ ಮಹಿಳೆಯರ ಸಂಖ್ಯೆ ಇನ್ನೂ ಕೂಡ 10%ಗಿಂತ ಕಡಿಮೆಯೇ ಇದೆ

**ನ್ಯಾಯಾಂಗ:**

- ಜಿಲ್ಲಾ ನ್ಯಾಯಾಂಗದಲ್ಲಿ ಮಹಿಳಾ ನ್ಯಾಯಾಧೀಶರುಗಳ ಒಟ್ಟಾರೆ ಪಾಲು 2017ದಲ್ಲಿದ್ದ 30%ನಿಂದ 2025ನಲ್ಲಿ 38.3% ಗೆ ಏರಿದೆ
- ಉಚ್ಚನ್ಯಾಯಾಲಯ ನ್ಯಾಯಾಧೀಶರುಗಳ ಪೈಕಿ ಬೆಳವಣಿಗೆಯು 2018ದಲ್ಲಿದ್ದ 11.4%ನಿಂದ 2025ನಲ್ಲಿ 14% ಗೆ ಏರಿದೆ

**ಕಾನೂನು ನೆರವು:**

- ಪ್ಯಾನೆಲ್ ವಕೀಲರಲ್ಲಿ ಮಹಿಳೆಯರ ಪಾಲು 2018ದಲ್ಲಿದ್ದ 18%ನಿಂದ 2024ನಲ್ಲಿ 28% ಗೆ ಹೆಚ್ಚಾಗಿದೆ
- ಪ್ಯಾರಾಲೀಗಲ್ ಸ್ವಯಂಸೇವಕರಲ್ಲಿ ಮಹಿಳೆಯರ ಪಾಲು 2019ದಲ್ಲಿದ್ದ 36%ನಿಂದ 2024 ನಲ್ಲಿ 42%ಗೆ ಹೆಚ್ಚಾಗಿದೆ

***ಕೆಲಸದ ಹೊರೆ***

- **ನ್ಯಾಯಾಂಗ:**

**ಬಾಕಿ ಇರುವ ಕೇಸ್‌ಗಳು**: ಕರ್ನಾಟಕ, ಮಣಿಪುರ, ಮೇಘಾಲಯ, ಸಿಕ್ಕಿಂ ಮತ್ತು ತ್ರಿಪುರ ಹೊರತುಪಡಿಸಿದರೆ, **ಎಲ್ಲಾ ಉಚ್ಚನ್ಯಾಯಾಲಯಗಳಲ್ಲೂ ಪ್ರತಿ ಎರಡು ಕೇಸ್‌ಗಳಲ್ಲಿ ಒಂದು ಕೇಸ್ ಮೂರು ವರ್ಷಕ್ಕಿಂತ ಹೆಚ್ಚಿನ ಕಾಲದಿಂದ ಬಾಕಿ ಉಳಿದಿದೆ**. ಜಿಲ್ಲಾ ನ್ಯಾಯಾಲಯಗಳಲ್ಲಿ, ಅಂಡಮಾನ್ ಮತ್ತು ನಿಕೋಬಾರ್, ಅರುಣಾಚಲಪ್ರದೇಶ, ಬಿಹಾರ, ಗೋವಾ, ಝಾರ್ಖಂಡ್, ಮಹಾರಾಷ್ಟ್ರ, ಮೇಘಾಲಯ,. ಒದಿಶ, ರಾಜಸ್ಥಾನ, ಉತ್ತರಪ್ರದೇಶ ಹಾಗೂ ಪಶ್ಚಿಮ ಬಂಗಾಳಗಳು, **ಬಾಕಿ ಇರುವ ಎಲ್ಲಾ ಕೇಸ್‌ಗಳ ಪೈಕಿ 40%ಗಿಂತ ಹೆಚ್ಚಿನವು ಮೂರಕ್ಕಿಂತ ಹೆಚ್ಚಿನ ವರ್ಷದಿಂದ ಬಾಕಿ ಇರುವುದಾಗಿ ವರದಿ ಮಾಡಿವೆ.**.

- **ಪೋಲಿಸ್:**

ಪ್ರತಿ ನಾಗರಿಕ ಪೋಲಿಸ್‌ಗೆ ಜನಸಂಖ್ಯೆ: ರಾಷ್ಟ್ರೀಯವಾಗಿ, Nationally, 831 ವ್ಯಕ್ತಿಗಳಿಗೆ 1 ನಾಗರಿಕ ಪೋಲಿಸ್ ಸಿಬ್ಬಂದಿ ಲಭ್ಯವಿದ್ದಾರೆ

- **ಸೆರೆಮನೆಗಳು:**

ವೈದ್ಯಕೀಯ ಅಧಿಕಾರಿಗಳು: ಭಾರತವು, ತನ್ನ573,220 ಕ್ಕಿಂತ ಹೆಚ್ಚಿನ ಸೆರೆಮನೆವಾಸಿಗಳಿಗೆ ಕೇವಲ 740 ವೈದ್ಯಾಧಿಕಾರಿಗಳನ್ನು ಹೊಂದಿದೆ. ಅದರಂತೆ, ಇದರ ಸರಾಸರಿ 775 ಸೆರೆಮನೆವಾಸಿಗೆ ಕೇವಲ ಒಬ್ಬ ವೈದ್ಯ ಎಂದಾಗುತ್ತದೆ. ಎಲ್ಲಾ ಸೆರೆಮನೆಗಳಾದ್ಯಂತ ಕೇವಲ 25 ಮಾನಸಿಕ ಸಮಾಲೋಚಕರು/
ಮನೋರೋಗ ತಜ್ಞರು ಇದ್ದಾರೆ.

Centre for Social Justice | COMMON CAUSE | CHRI | DAKSH | TISS | PRAYAS | VIDHI Centre for Legal Policy | How INDIA Lives

India Justice Report | 2025

*ಮೂಲ ಸೌಕರ್ಯ*

- **CCTVಗಳು:** 17% ಪೋಲಿಸ್ ಠಾಣೆಗಳು ಒಂದೇ ಒಂದು CCTV ಕೂಡ ಹೊಂದಿಲ್ಲ. ಹೆಚ್ಚುಕಡಿಮೆ ಹತ್ತು ಪೋಲಿಸ್ ಠಾಣೆಗಳ ಪೈಕಿ ಮೂರು ಪೋಲಿಸ್ ಠಾಣೆಗಳು ಮಹಿಳಾ ಸಹಾಯ ಮೇಜುಗಳನ್ನು ಹೊಂದಿಲ್ಲ.

- **ನೆಲೆಸಿರುವಿಕೆ:** 56% (724 ಸೆರೆಮನೆಗಳು) 100%ಗಿಂತ ಹೆಚ್ಚಿನ ಸಾಮರ್ಥ್ಯದಲ್ಲಿ ಕೆಲಸ ಮಾಡುತ್ತಿವೆ. ಸುಮಾರು 20% (262 ಸೆರೆಮನೆಗಳು) 150%-250% ನಡುವೆ ನೆಲೆಸಿರುವಿಕೆ ಪ್ರಮಾಣ ದಾಖಲಿಸಿದ್ದವು. ದೇಶದಲ್ಲಿ **176 ಸೆರೆಮನೆಗಳು 200%ಗಿಂತ ಹೆಚ್ಚಿನ ನೆಲೆಸಿರುವಿಕೆ ಪ್ರಮಾಣ ದಾಖಲಿಸಿದ್ದವು.**

- **ವಿಚಾರಣಾಧೀನ ಖೈದಿಗಳು:** ಅರುಣಾಚಲ ಪ್ರದೇಶ ಮತ್ತು ಮಧ್ಯ ಪ್ರದೇಶವನ್ನು ಹೊರತುಪಡಿಸಿದರೆ, ಎಲ್ಲಾ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ವಿಚಾರಣೆಯಲ್ಲಿರುವ ಖೈದಿಗಳ ಸಂಖ್ಯೆ 60% ಮೀರಿದೆ. ದೆಹಲಿ ಅತ್ಯಧಿಕ ವಿಚಾರಣೆಯಲ್ಲಿರುವ ಖೈದಿಗಳ ಸಂಖ್ಯೆಯನ್ನು ಹೊಂದಿ, ಅದರ ಸೆರೆಮನೆಗಳಲ್ಲಿ 91% ವಿಚಾರಣೆಯಡಿ ಇರುವ ಖೈದಿಗಳಿದ್ದಾರೆ.